# Na. D'Sozaravara 'Mulugade' Kaadambariya Sutta... Mutta...

- Dr. Raghunatha H.S

# ನಾ.ಡಿಸೋಜರವರ 'ಮುಳುಗಡೆ' ಕಾದಂಬರಿಯ ಸುತ್ತಾ ಮುತ್ತಾ...

- ಡಾ. ರಘುನಾಥ ಎಚ್.ಎಸ್

ಕನ್ನಡ ಸಹ ಪ್ರಾಧ್ಯಾಪಕರು,
ಶ್ರೀಮತಿ ಇಂದಿರಾಗಾಂಧಿ ಸರ್ಕಾರಿ,
ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು,
ಸಾಗರ, ಶಿವಮೊಗ್ಗ ಜಿಲ್ಲೆ.

ಅಭಿವೃದ್ಧಿಯಪರಿಕಲ್ಪನೆಇಂದುನವೀನತೆಯಮಾರ್ಗವನ್ನುಕಂಡುಕೊಂಡಿದೆ.ಆಧುನಿಕತೆವಿಕಾಸ ಗೊಂಡಂತೆ ಅಭಿವೃದ್ಧಿಯ ರೂಪಗಳೂ ಸಹ ಹಲವುಸ್ವರೂಪವನ್ನುಪಡೆದುಕೊಳ್ಳುತ್ತದೆ.ಸಮಾಜಪರಿವರ್ತನಾಗುಣವನ್ನುಹೆಚ್ಚೆಚ್ಚುಕಂಡುಕೊಳ್ಳುತ್ತಿದೆಎಂದ ರೆಸಹಜವಾಗಿಅದುತನ್ನಶಕ್ತಿಯನ್ನುಭೌತಿಕಬೆಳವಣಿಗೆಯಕಡೆಗೂಹರಿಸುತ್ತಿದೆಎಂದೇಈಗಅರ್ಥೈಸಬೇಕಾಗು ತ್ತದೆ.

ಜನರನ್ನಾಳುವಸರ್ಕಾರಗಳುಸಹತಮ್ಮಅಸ್ತಿತ್ವದಕರುವಾಗಿಅಭಿವೃದ್ಧಿಯೇನಮ್ಮಮೂಲಮಂತ್ರವೆ ನ್ನುವ ಘೋಷಣೆಯನ್ನುನಿರಂತರವಾಗಿಹಾಕುತ್ತವೆಅದುಸರ್ಕಾರದಜೀವಂತಿಕೆಗೆಅನಿವಾರ್ಯವೂ ಆಗಿರುತ್ತದೆ.

ತಮ್ಮ ವ್ಯಾಪ್ತಿಯ ಸಮಾಜದಅಭಿವೃದ್ಧಿಯಪ್ರಶ್ನೆಬಂದಾಗಕೆಲವೊಮ್ಮೆಜನಪರವಾದ,ಮತ್ತೆಕೆಲವೊಮ್ಮೆಜನ ವಿರೋಧಿಯಾದ ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರಗಳು ಕೈಹಾಕಬೇಕಾಗುತ್ತದೆ.ಇಂತಹಸಂದರ್ಭದಲ್ಲಿ ಸರ್ಕಾರಗಳು ಕೈಗೊಳ್ಳುವ ಭೌತಿಕವಾದಕೆಲಸಗಳುದೊಡ್ಡಮಟ್ಟದವಾಗ್ವಾದಮತ್ತುಸಮಸ್ಯೆಗಳನ್ನುತಂದೊಡ್ಡುತ್ತವೆ. ಜಲಾಶಯ ನಿರ್ಮಾಣ, ವಿದ್ಯುತ್ ಜಾಲದ ನಿರ್ಮಾಣ, ವಸತಿಪ್ರದೇಶಗಳನಿರ್ಮಾಣ,ರಸ್ತೆ, ಕಾಲುವೆ, ಸೇತುವೆ ಮುಂತಾದ ಜನಪರ ಅಭಿವೃದ್ಧಿಕಾರ್ಯಗಳನಿರ್ಮಾಣದಕಾಮಗಾರಿಯಪ್ರಶ್ನೆಗಳುಯಾವಾಗಲೂಪರಮತ್ತುವಿರೋಧದಹಂತವ ನ್ನು ಪಡೆದುಕೊಳ್ಳುತ್ತವೆ.ಏಕೆಂದರೆಇಲ್ಲಿಸಮಾಜಮುಖಿಯಾದಕಾಮಗಾರಿಯಅಗತ್ಯತೆಯಜೊತೆಗೆಪರಿಸರನಾಶ

,ಬದುಕಿನನಾಶದಪ್ರಶ್ನೆಗಳೂ ತುಳುಕುಹಾಕಿಕೊಂಡುಸರ್ಕಾರಮತ್ತುಸಮಾಜದಈನಡುವೆದೊಡ್ಡಮಟ್ಟದಘರ್ಷಣೆ ಉಂಟಾಗುತ್ತದೆ.

ಕರ್ನಾಟಕದಲ್ಲಿಂದುಹೆಚ್ಚುಚರ್ಚೆಯಾಗುತ್ತಿರುವಉತ್ತರಕನ್ನಡದತದಡಿಉಷ್ಣವಿದ್ಯುತ್ಸ್ಥಾವರನಿರ್ಮಾಣದಪ್ರಸ್ತಾಪ,ಕುದುರೆಮುಖಅದಿರುಕಾರ್ಖಾನೆಯಸ್ಥಗಿತತೆಯಸಮಸ್ಯೆ,ಚಿಕ್ಕಮಗಳೂರುಜಿಲ್ಲೆಯರಕ್ಷಿತ ಅರಣ್ಯದಸಮಸ್ಯೆಇವುಗಳಜೊತೆಗೆಕೆಲವುಜಲವಿದ್ಯುತ್ಯೋಜನೆಗಳಕುರಿತಾದಜಿಜ್ಞಾಸೆಯನ್ನುಗಮನಿಸಿದಾಗ ಈಸಂಗತಿಅರಿವಾಗುತ್ತದೆ.ಇಲ್ಲಿಅಭಿವೃದ್ಧಿಕಾರ್ಯದಅಗತ್ಯತೆಯ ಪ್ರಶ್ನೆಎಷ್ಟುಮುಖ್ಯವೋಅದೇಮಟ್ಟಿಗೆಅವುಉಂಟುಮಾಡುವಜನವಿರೋಧಿ,ನಿಸರ್ಗವಿರೋಧಿಯಾದಕ್ರಮಗಳೂಅಷ್ಟೇಗಂಭೀರಪ್ರಮಾಣದಸಮಸ್ಯೆಗಳಾಗಿವೆ.ನಮ್ಮಸರ್ಕಾರಗಳುರೂಪಿಸುವಅಭಿವೃದ್ಧಿಯೋಜನೆಗಳಲ್ಲಿ ತಳಮಟ್ಟದಸ್ಪಷ್ಟಕಲ್ಪನೆಯಿಲ್ಲದಿರುವುದೇಇಂತಹಸಮಸ್ಯೆಯಭಾವನಾತ್ಮಕಸಂಗತಿಯನ್ನುಮತ್ತಷ್ಟುಬಿಗುಗೊಳಿಸುತ್ತವೆ.

ಈರೀತಿಅಭಿವೃದ್ಧಿಯಅಗತ್ಯತೆ ಮತ್ತುಅದು ಉಂಟುಮಾಡುವಬಹುಮುಖಿಜನವಿರೋಧಿಸಮಸ್ಯೆಗಳಜಿಜ್ಞಾಸೆಯ ನೆಲೆಯಲ್ಲಿಯೇ 'ನಾಡಿಸೋಜ' ರವರ 'ಮುಳುಗಡೆ' ಕಾದಂಬರಿಯನ್ನು ಗಮನಿಸಬಹುದು.

ಶಿವಮೊಗ್ಗ ಜಿಲ್ಲೆಯ ಸಾಗರದ ಡಾ. ನಾ.ಡಿಸೋಜರು ನಮ್ಮ ನಡುವಿನ ಅಪರೂಪದ ಗದ್ಯ ಬರಹಗಾರರು. ಸಣ್ಣಕಥೆ, ಕಾದಂಬರಿಗಳ ಮೂಲಕ ಸುತ್ತಲ ಬದುಕಿನ ತಲ್ಲಣಗಳಿಗೆ, ನಿಸರ್ಗದ ಮೇಲಿನ ಆಕ್ರಮಣಗಳಿಗೆ ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತಿರುವ ಚಿಂತನಾಶೀಲ ಬರಹಗಾರ ಡಾ. ನಾ.ಡಿಸೋಜ.

ವಿಶೇಷವಾಗಿ ಮಲೆನಾಡಿನ ವಿಶಿಷ್ಟಜನ ಜೀವನ, ಸಂಸ್ಕೃತಿ, ಅದರ ವಿಕಾಸ ಇವುಗಳನ್ನು ತಮ್ಮ ಕೃತಿಗಳಲ್ಲಿ ಕಾಣಿಸುವ ನಾ.ಡಿಸೋಜರು ಮುಖ್ಯವಾಗಿ ಮಲೆನಾಡಿನ ಬದುಕು ಆಧುನಿಕತೆಯ ಸೆಳತಕ್ಕೆ ತುತ್ತಾಗಿ ಹಲವು ಬಗೆಯ ತಲ್ಲಣಗಳಿಗೆ ಒಳಗಾಗುತ್ತಿರುವುದನ್ನು ಸೂಕ್ಷ್ಮವಾಗಿ ತಮ್ಮ ಕೃತಿಗಳಲ್ಲಿ ತರುತ್ತಾರೆ.

1983 ರಲ್ಲಿ ರಚನೆಗೊಂಡ 'ಮುಳುಗಡೆ' ಡಿಸೋಜರ ಪ್ರಮುಖ ಕಾದಂಬರಿ. ಇದು ಕರ್ನಾಟಕದಅರ್ಧಕ್ಕಿಂತಲೂ ಹೆಚ್ಚಿನ ಭೂ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಮಾಡುತ್ತಿರುವ ಶರಾವತಿ ಜಲವಿದ್ಯುತ್ ಗಾರದ ಸ್ಥಾಪನೆಗಾಗಿ ಲಿಂಗನಮಕ್ಕಿಯಲ್ಲಿ ಶರಾವತಿ ನದಿಗೆ ಅಡ್ಡಲಾಗಿ 1977ರ ಭಾಗದಲ್ಲಿ ನಿರ್ಮಿಸಿದ ಅಣೆಕಟ್ಟು, ಅದರಿಂದ ಉಂಟಾದ ಮುಳುಗಡೆ, ಸುಮಾರು 3847 ಕುಟುಂಬಗಳು ಬೇರೆಡೆಗೆ ಸ್ಥಳಾಂತರವಾದದ್ದು, ನೂರಾರು ಹಳ್ಳಿಗಳು ಮುಳುಗಡೆಯಾದದ್ದು, ಇತ್ಯಾದಿ ಅನೇಕ ಸಂಗತಿಗಳನ್ನು ವಸ್ತುವಾಗಿಟ್ಟುಕೊಂಡು ಮುಳಗಡೆ ಕಾದಂಬರಿ ರಚನೆಯಾಗಿದೆ. ವಾಸ್ತವದ ಆಧಾರದ ಜೊತೆಗೆ

ಕೆಲಮಟ್ಟಿನ ಕಾಲ್ಪನಿಕ ಸಂಗತಿಗಳನ್ನು ಬೆಸೆದಿರುವ ಈ ಕೃತಿ ಒಟ್ಟಾರೆ ಉಂಟು ಮಾಡುವ ಪ್ರಬಂಧ ಧ್ವನಿ ನಿಜಕ್ಕೂ ತಲ್ಲಣ ಉಂಟುಮಾಡುವಂತಹದ್ದು.

ಮುಳುಗಡೆತಂದೊಡ್ಡುವಅಪಾಯಗಳನ್ನುಹಲವುಆಯಾಮಗಳಲ್ಲಿಚಿತ್ರಿಸುವ ಈಕಾದಂಬರಿಲಿಂಗನಮಕ್ಕಿಜಲಾಶಯನಿರ್ಮಾಣದಹಿಂದಿನಕಥೆ, ವ್ಯಥೆಯವಿಭಿನ್ನ ಮುಖಗಳನ್ನು ಹೇಳುತ್ತಾ ಹೋಗುತ್ತದೆ. ಕಾದಂಬರಿಗೆ ಕಥಾನಕದ ಸ್ವರೂಪವನ್ನು ನೀಡುವ ದೃಷ್ಟಿಯಿಂದಪ್ರಾಚ್ಯವಸ್ತುಸಂಗ್ರಹಾಲಯಇಲಾಖೆಯನೌಕರರಮೇಶನುಮುಳುಗಡೆಪ್ರದೇಶದಲ್ಲಿನಶಿಸಿಹೋಗಲಿರುವಪ್ರಾಚೀನಶಿಲಾಶಾಸನಗಳು, ದೇವಾಲಯ,ಜೈನಬಸದಿ, ಮಾಸ್ತಿಗಲ್ಲು, ವೀರಗಲ್ಲು ಮುಂತಾದ ಆಕರಗಳನ್ನು ಸಂಗ್ರಹಿಸಿ ತನ್ನ ಇಲಾಖೆಗೆವರದಿಮಾಡುವಕಾರ್ಯಕ್ಕೆನಿಯೋಜನೆಗೊಂಡುಮುಳುಗಡೆಯಾಗುವಪ್ರದೇಶದಲ್ಲಿಸಂಚರಿಸಿ,ಅಲ್ಲಿನನೈಜಸ್ಥಿತಿಯನ್ನುವಿವರಿಸುವದಾಟಿಯಲ್ಲಿಕಾದಂಬರಿಯುನಿರೂಪಣೆಗೊಂಡಿದೆ.

ಜಲಾಶಯನಿರ್ಮಾಣಒಂದೆಡೆಅಗತ್ಯವಾದರೂಸಹಅದುಮುಳುಗಿಸುವುದುಕೇವಲಭೌಗೋಳಿಕಪ್ರದೇಶವನ್ನುಮಾತ್ರವಲ್ಲಶತಮಾನಗಳಿಂದಲೂಬಾಳಿಬದುಕಿದಜನಜೀವನ,ಪರಂಪರೆನೂರಾರುಹಳ್ಳಿಗಳುಒಂದೇಎರಡೇನೂರಾರುಸಂಗತಿಗಳನ್ನುಮುಳುಗಿಸುತ್ತದೆ.

ಅನೇಕಶತಮಾನಗಳಿಂದಅನೇಕರುಬಾಳಿಬದುಕಿದದೊಡ್ಡ ಜೈನಕುಟುಂಬದವಾಸಸ್ಥಳ ಹಿಡಿತೇರಿ ಅರಮನೆಯ ನಾಶ, ಹಿರಿಯರು ಬಾಳಿಬದುಕಿದಮನೆಸದ್ಯದಲ್ಲೇನೀರುಪಾಲಾಗುವುದನ್ನು ಸಹಿಸಲಾರದೇಅದೇಕೊರಗಿನಲ್ಲಿ ಮೃತಪಡುವಕುಟುಂಬದಯಜಮಾನ ಧನಪಾಲಯ್ಯನ ಸಾವು, ಅನೇಕದೇವಾಲಯ, ಬಸದಿಗಳುನೀರಿನಲ್ಲಿಆವೃತ್ತಗೊಳ್ಳುವುದರೊಂದಿಗೆ,ಸಾವಿರಾರುಎಕರೆಅಡಿಕೆತೋಟ, ಬಾಳೆ ತೋಟ, ಗದ್ದೆ,ಬಯಲು, ಮನೆ, ಮಠಗಳುಅಕ್ಷರಶಹನೀರುಪಾಲಾಗುತ್ತವೆ.ಮುಳುಗಡೆಯಹಳ್ಳಿಗಳನ್ನುಸರ್ಕಾರಒತ್ತಾಯದಿಂದಖಾಲಿಮಾಡಿಸಲುಪ್ರಾರಂಭಿಸಿದಮೇಲೆಲಾರಿಗಳಲ್ಲಿಜನರುತಮ್ಮಮನೆಸಾಮಾನುಗಳನ್ನುತುಂಬಿಕೊಂಡು ಹೋಗುವುದು ದಿನನಿತ್ಯದದೃಷ್ಯವಾಗುತ್ತದೆ. ಕಾರ್ಗಲ್ಲಮೂಲಕಈ ಲಾರಿಗಳುಹೋಗುತ್ತಿರುವುದನ್ನುನೋಡುವುದೇ ಒಂದುಯಾತನೆ.

ಸರ್ಕಾರವೇನೋಬಹಳಉದಾರವಾಗಿಮುಳುಗಡೆಯಾಗುವಕುಟುಂಬಗಳಿಗೆನಷ್ಟವಾದಆಸ್ತಿಗನುಗುಣವಾಗಿಬೇರೆಡೆಗೆಪರ್ಯಾಯಸ್ಥಳನೀಡಿದ್ದರೂಸಹ,ಸಾವಿರಾರುವರ್ಷಗಳಿಂದಬಾಳಿಬದುಕಿದಮನೆ, ಮಠ,ಬದುಕನ್ನುಬಿಟ್ಟುಬೇರೆಕಡೆಗೆ ಗುಳೇಹೋಗುವುದನ್ನುಕಲ್ಪಿಸಿಕೊಳ್ಳಲೂಇಲ್ಲಿಯ ಜನ ಸಿದ್ಧರಿಲ್ಲ. ಆದರದು ಅನಿವಾರ್ಯ ಎಂಬುದು ಅವರಿಗೂ ಗೊತ್ತು. ಹೊಸ ಪ್ರದೇಶಗಳಿಗೆಹೋದಜನರಬದುಕುಹಿಂದಿಗಿಂತಲೂಉತ್ತಮವಾಗಿರುತ್ತದೆಯೋಅಥವಾಇಲ್ಲವೋ?ಅವರ

ಮಾನಸಿಕಸ್ಥಿತಿಗತಿಗಳೇನುಎಂಬಿತ್ಯಾದಿ ಹಲವುಪ್ರಶ್ನೆಗಳನ್ನುಕಾದಂಬರಿ ಎತ್ತುತ್ತದೆ. ಕಾದಂಬರಿಕಾರರುಹೇಳುವಂತೆ,ಮಲೆನಾಡಿನಜನರೊಂದಿಗೆಸಮನಾಗಿಬಾಳಿಬದುಕಿದದನಕರುಗಳನ್ನುಹೊಡೆದುಕೊಂಡುಹೋದಏಳೆಂಟುದಿನಗಳನಂತರಪುನಃಊರಿಗೇನೆಅವುಹಿಂದುರುಗಿಬಂದವು.ಪ್ರಾಣಿಗಳೇಈ ರೀತಿವರ್ತಿಸಿದಮೇಲೆಇನ್ನೂಜನರಪ್ರತಿಕ್ರಿಯೆಹೇಗಿದಿತ್ತು. ಈ ಮುಳುಗಡೆಸಾವಿರಾರುಬಗೆಯಲ್ಲಿಜನ ಮನದಅಂತಃಕರಣವನ್ನುಕಲಕುತ್ತದೆ.

ಶರಾವತಿಮುಳುಗಡೆಕಥೆಯುಈರೀತಿಮನೆ, ಮಠ,ವಸ್ತುಗಳುನಾಶವಾದಕಥೆಮಾತ್ರವಾಗದೇಮಾನವೀಯತೆಯೂಇಲ್ಲಿಮುಳುಗಡೆಯಾದವಿವರವನ್ನೇ ಹೇಳುತ್ತದೆ.ಸಂತ್ರಸ್ಥರಿಗೆಪರಿಹಾರದಚೆಕ್ಕನ್ನುನೀಡಲುಮುಳುಗಡೆಆಫೀಸ್ನಪಾಪಯ್ಯ,ಡಯಾಸ್ಮೊದಲಾದ ಗುಮಾಸ್ತರುನಡೆಸುವಲಂಚದ ಹಾವಳಿ, ಆಸ್ತಿ ಮೌಲ್ಯದ ಅಂದಾಜಿನಬಗ್ಗೆಸುಳ್ಳುಲೆಕ್ಕಬರೆಸುವವಶೀಲಿ, ಮುಳುಗಡೆಮತ್ತುಯೋಜನೆಯಕಾಮಗಾರಿವಿರುದ್ಧಹೋರಾಡಲುಸಂತ್ರಸ್ತರಸಂಘಕಟ್ಟಲುಮುಂದಾಗಿಜನರಿಂದಲಕ್ಷಾಂತರರೂಪಾಯಿವಸೂಲುಮಾಡುವರಂಗೇಗೌಡನಂತಹದುರುಳರೂಇಲ್ಲಿದ್ದಾರೆ.ಜಲಾಶಯನಿರ್ಮಾಣದಕೆಲಸಗಾರರಕೂಲಿಹಣವನ್ನುತಿಂದುಹಾಕಿ,ಅವರನ್ನುಶೋಷಿಸುವ ದೂರ್ತಸರ್ಕಾರಿಅಧಿಕಾರಿಗಳೂ ಸಹಇಲ್ಲಿದ್ದಾರೆ. ಜನ ಬಹುಪ್ರೀತಿಯಿಂದರೂಪಿಸಿಕೊಂಡಯಕ್ಷಗಾನ ತಂಡವೂ ಒಂದೇಬಾರಿಗೆಮುಳುಗಡೆಯಾಗುತ್ತದೆ.ಈರೀತಿಶರಾವತಿತನ್ನಒಡಲೊಳಗೆತುಂಬಿಕೊಂಡಿದ್ದುಒಂದೇ ಎರಡೇಇಡೀ ಜೀವಂತಜನಸಮುದಾಯವೇಸೇರಿದೆ.

ಇನ್ನುಮುಳುಗಡೆಕೇವಲನಷ್ಟವನ್ನೇ ಉಂಟುಮಾಡಿತ್ತುಎಂದರೆತಪ್ಪು...ಇದರಿಂದಕೆಲವರಿಗೆ ಲಾಭವೂ ಆಯಿತು. ಕ್ರೌರ್ಯದ ಪ್ರತಿರೂಪವೇ ಆಗಿದ್ದಜಮೀನ್ದಾರ್ ರಂಗಪ್ಪಗೌಡನ ಅಟ್ಟಹಾಸ ಮುಳುಗಿ ಹೋಗುತ್ತದೆ. ಈತ ಮುಂದೆ ಶಿವಮೊಗ್ಗದಲ್ಲಿ ದೊಡ್ಡ ಕಂಟ್ರಾಕ್ಟರ್ ಆಗುತ್ತಾನೆ. ನಾಗೋಲಿಯ ಎಳೆಯ ಹರೆಯದ ವಿಧವೆ ಪಾರ್ವತ್ತಮ್ಮ ಮತ್ತು ಆಕೆಯ ಪ್ರಿಯಕರ ಶ್ರೀಧರ ಮುಳುಗಡೆಯಾದ ನಂತರ ಬೇರೆ ಊರಿಗೆ ತೆರಳಿ ನೆಮ್ಮದಿಯ ಹೊಸ ಬದುಕನ್ನು ನಡೆಸುತ್ತಾರೆ. ಅವರ ಪಾಲಿಗೆ ಜನರ ಕಾಕದೃಷ್ಟಿ ನಿಜಕ್ಕೂ ಮುಳುಗಡೆಯಾಗುತ್ತದೆ. ಬೆಲೆಬಾಳುವ ಕೆಲವು ಪ್ರಾಚೀನ ಕಾಲದ ದೇವರ ವಿಗ್ರಹ ಮೊದಲಾದವುಗಳು ಕಳ್ಳ ಸಾಗಾಣಿಕೆದಾರರ ಪಾಲಾಗಿ ಕೆಲವರಿಗೆ ಒಂದಿಷ್ಟು ಹಣವೂ ಸೇರುತ್ತದೆ.

ನಿಜಕ್ಕೂಇಲ್ಲಿಲಾಭಕ್ಕಿಂತನಷ್ಟವೇಮುಖ್ಯವಾಗಿದೆ.ಮುಳುಗಡೆಯಹೊಡೆತವನ್ನುತಾಳಲಾರದೇಹಿಡಿತೇರಿಅರಮನೆಯಯಜಮಾನಧನಪಾಲಪಾಟೀಲರುಮಳೆಗಾಲಆರಂಭದ ಐದೇದಿನಗಳಲ್ಲಿಕೊರಗಿನಿಂದಸಾಯುವುದುಮನಕಲಕುತ್ತದೆ.ಸಾಗರಪಟ್ಟಣಕ್ಕೆ ಕೇವಲ ಹತ್ತಾರು ಮೈಲಿಗಳಲ್ಲಿ ಹೋಗಿಬರುವ ಹಳ್ಳಿಯಜನರಿಗೆಡ್ಯಾಮ್ನಿರ್ಮಾಣದನಂತರಸುತ್ತಿಬಳಸಿ 80 ಕಿಲೋಮೀಟರ್ ಕಾಡುರಸ್ತೆಸುತ್ತಿ ಪೇಟೆ ನೋಡಬೇಕಾಗುತ್ತದೆ. ಇಂದಿಗೂ ಶರಾವತಿ ಹಿನ್ನೀರಿನ ತುಮರಿ, ಬ್ಯಾಕೋಡು

ಸಾಗರ ತಾಲ್ಲೂಕಿನ ನುಡುಗಡ್ಡೆಯ ಪ್ರದೇಶವಾಗಿದೆ. ಜನ, ದನ, ವಾಹನ ಎಲ್ಲವೂ ಲಾಂಚ್ನಮೂಲಕವೇಪ್ರಯಾಣಿಸಬೇಕುಇಲ್ಲಿಗೆಇಂದಿಗೂಹೆಚ್ಚಿನಸಂಖ್ಯೆಯಸರ್ಕಾರಿಶಾಲೆಕಾಲೇಜುಗಳಿಲ್ಲ,ಅಗತ್ಯದನಾಗರೀಕಸೌಲಭ್ಯಗಳಿಲ್ಲ.ಈರೀತಿಮುಳುಗಡೆಯಹಿನ್ನೆಲೆಯಲ್ಲಿಪ್ರತಿಯೊಬ್ಬನಸ್ವಾರ್ಥತಲೆ ಎತ್ತಿಮನುಷ್ಯತ್ವವೇಮುಳುಗಡೆಯಾದವಿವರವನ್ನುಗಮನಿಸಬಹುದು.

ಇಡೀ ನಾಡಿಗೆ ಬೆಳಕನ್ನು ಬೀರುವ ಶರಾವತಿ ಜಲ ವಿದ್ಯುತ್ ಗಾರ, ಲಿಂಗನಮಕ್ಕಿಅಣೆಕಟ್ಟುನಿರ್ಮಾಣದಮುಳುಗಡೆ ಸಂತ್ರಸ್ತರ ಬದುಕು ಇಂದಿಗೂಕತ್ತಲೆಯಲ್ಲೇ ಇದೆ.ಮುಳುಗಡೆಪ್ರತಿಕುಟುಂಬದಮೇಲೆ,ಪ್ರತಿವ್ಯಕ್ತಿಯಮೇಲೆಒಂದಲ್ಲಾ ಒಂದುರೀತಿಯಪರಿಣಾಮವನ್ನುಬೀರಿದೆ.ಚರ್ಚಿಸಬೇಕಾದಮುಳುಗಡೆಯಸಮಸ್ಯೆಗಳು ಸಾಕಷ್ಟಿವೆ.

ಒಂದುಕಾದಂಬರಿಯವ್ಯಾಪ್ತಿಯಲ್ಲಿಮುಳುಗಡೆಯುಒಂದುಸಮೃದ್ಧ, ಪ್ರಾಕೃತಿಕ ಸಂಪತ್ ಭರಿತ ಜೀವನದ್ರವ್ಯವನ್ನೇಸಂಪೂರ್ಣವಾಗಿಇಲ್ಲವಾಗಿಸಿದದುರಂತವನ್ನುನಾ.ಡಿಸೋಜರು ಕೆಲವುಪಾತ್ರ,ಸನ್ನಿವೇಶಗಳ ಮೂಲಕಸಮರ್ಥವಾಗಿಪ್ರತಿಬಿಂಬಿಸಿದ್ದಾರೆ.